ಚುಟುಕು ಸುದ್ದಿ

ಗ್ರಾಮೀಣ ಮಕ್ಕಳು ಶಿಕ್ಷಣ ದಿಂದ ವಂಚಿತರಾಗಬಾರದು: ಶಾಸಕ ಬಸನ ಗೌಡ

ಉದಯಕಾಲ ನ್ಯೂಸ್

ಮಸ್ಕಿ: ಕ್ಷೇತ್ರದ ಗ್ರಾಮೀಣ ಮಕ್ಕಳು ಶಿಕ್ಷಣ ದಿಂದ ವಂಚಿತ ರಾಗ ಬಾರದು ಎಂಬ ಉದ್ದೇಶ ದಿಂದ ಸರಕಾರ ಗ್ರಾಮೀಣ ಶಾಲೆ ಗಳಲ್ಲಿ ಯುಕೆಜಿ, ಎಲ್ ಕೆಜಿ ತರಗತಿ ಗಳನ್ನು ಆರಂಭಿಸಿದೆ ಎಂದು ಖಾದಿ ಗ್ರಾಮದ್ಯೋಗ ನಿಗಮ ಮಂಡಳಿ ಅಧ್ಯಕ್ಷ, ಶಾಸಕ ಬಸನ ಗೌಡ ತುರ್ವಿಹಾಳ ಹೇಳಿದರು.

ತಾಲೂಕಿನ ಹಿರೇ ದಿನ್ನಿ ಗ್ರಾಮದ ಉನ್ನತಿಕರೀಸಿದ ಶಾಲೆ ಯಲ್ಲಿ ಯುಕೆಜಿ, ಎಲ್ ಕೆಜಿ ತರಗತಿಗಳಿಗೆ ಚಾಲನೆ ನೀಡಿ ಮಾತನಾಡಿದರು. ಶಿಕ್ಷಣದ ಪ್ರಗತಿಗೆ ಸರಕಾರ ನಾನಾ ಯೋಜನೆ ಗಳನ್ನು ಜಾರಿ ಗೊಳಿಸಿದೆ ಗ್ರಾಮೀಣ ಭಾಗದಲ್ಲಿ ಕರ್ತವ್ಯ ನಿಭಾಯಿಸುತ್ತಿರು ಶಿಕ್ಷಕರು ಗ್ರಾಮೀಣ ಭಾಗದ ವಿದ್ಯಾರ್ಥಿ ಗಳಿಗೆ ಗುಣ ಮಟ್ಟದ ಶಿಕ್ಷಣ ನೀಡಲು ಕಾಳಜಿ ವಹಿಸ ಬೇಕು ಎಂದರು.

ವಿದ್ಯಾರ್ಥಿಗಳು ಅಭ್ಯಾಸದ ಕಡೆ ಗಮನ ಹರಿಸಿ ಒಳ್ಳೆಯ ಶಿಕ್ಷಣ ಪಡೆದು ಉಜ್ವಲ ಭವಿಷ್ಯ ರೂಪಿಸಿ ಕೊಳ್ಳಿ ಎಂದು ಶಾಸಕರು ವಿದ್ಯಾರ್ಥಿ ಗಳಿಗೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಗ್ರಾಪಂ. ಅಧ್ಯಕ್ಷೆ ಎಲ್ಲಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲ ದಿನ್ನಿ, ಗ್ರಾಪಂ. ಉಪಾಧ್ಯಕ್ಷ, ಸದಸ್ಯರು, ಶಿಕ್ಷಣ ಇಲಾಖೆ ಅಧಿಕಾರಿಗಳು ಮುಖಂಡರಿದ್ದರು. ನಂತರ ತಾಲೂಕಿನ ಅಡವಿ ಬಾವಿ ತಾಂಡದಲ್ಲಿ ಏರ್ಪಡಿಸಿದ್ದ ವಲಯ ಮಟ್ಟದ ಕ್ರೀಡಾಕೂಟಕ್ಕೆ ಶಾಸಕರು ಚಾಲನೆ ನೀಡಿದರು. ಈ ಸಂದರ್ಭಲ್ಲಿ ತಾಪಂ. ಮಾಜಿ ಅಧ್ಯಕ್ಷ ಶಿವಣ್ಣ ನಾಯಕ, ಅಮರೇಶ ಅಡವಿ ಬಾವಿ, ಶಿಕ್ಷಕರು ಇದ್ದರು.

ಅಕ್ರಮ ಮರಳು,ಜೂಜಾಟ ಗಾಂಜಾ,ಸಿಂಧನೂರಿನಲ್ಲಿ ಹೆಚ್ಚು ಪೊಲೀಸ್ ಇಲಾಖೆ ಮೌನ: ವೆಂಕೋಬ ನಾಯಕ್

ಉದಯಕಾಲ ನ್ಯೂಸ್

ಸಿಂಧನೂರು: ದಿನದಿಂದ ದಿನಕ್ಕೆ ನಗರ ಹಾಗೂ ವಿವಿಧ ಗ್ರಾಮೀಣ ಪ್ರದೇಶದಲ್ಲಿ ಅಕ್ರಮ ಮರಳು ಸಾಗಾ ಣಿಕೆ, ಜೂಜಾಟ, ಗಾಂಜಾ ಇನ್ನಿ ತರ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದರು, ಇದರ ಬಗ್ಗೆ ಯಾವುದೇ ಕ್ರಮ ಜರುಗಿಸದೆ ಪೊಲೀಸ್ ಇಲಾಖೆ ಮಾತ್ರ ಮೌನ ವಹಿಸಿದೆ ಎಂದು ಬಿಜೆಪಿ ಮಂಡಲ ಅಧ್ಯಕ್ಷ ವೆಂಕೋಬ ನಾಯಕ್ ಹೇಳಿದರು.

ಅವರು ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು ಅನೇಕ ಬಾರಿ ಅಕ್ರಮ ಚಟುವಟಿಕೆಗಳ ಬಗ್ಗೆ ಪೊಲೀಸ್ ಇಲಾಖೆಯವರಿಗೆ ತಿಳಿಸಿದರು, ಯಾವುದೇ ಸಂಬಂಧವಿಲ್ಲದಂತೆ ದೂರ ಇರುತ್ತಾರೆ, ಹಾಗೂ ಕರೆಗಳು ಮಾಡಿದರು ಉತ್ತರಿಸದೆ ಮೌನ ವಹಿಸುತ್ತಾರೆ ಇದರಲ್ಲಿ ಪೊಲೀಸ್ ಇಲಾಖೆ ಸಹ ಭಾಗಿ ಯಾಗಿದೆ ಎಂಬ ಅನುಮಾನ ಕಾಡುತ್ತಿದೆ ಎಂದರು.

ಶಾಸಕರ ಬೆಂಬಲಿಗರಿಂದ ಅನೇಕ ಚಟುವಟಿಕೆಗಳು : ಜೂಜಾಟ,ಅಕ್ರಮ ಮರಳು ಸಾಗಾಣಿಕೆಯಲ್ಲಿ ಶಾಸಕರ ಬೆಂಬಲಿಗರೇ ಹೆಚ್ಚು ಇದ್ದಾರೆ, ನಾವು ಶಾಸಕರ ಬೆಂಬಲಿಗರು ಇದ್ದೇವೆ, ನಮಗೆ ಯಾವ ಅಧಿಕಾರಿಗಳು ಏನು ಮಾಡಿ ಕೊಳ್ಳುವುದಿಲ್ಲ, ಎಂಬ ಗಟ್ಟಿ ಧ್ವನಿಯಿಂದ ಮಾತನಾಡಿ ಇಂಥ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ ಎಂದರು.

ಕಾಂಗ್ರೆಸ್ಸ ಕೈ ಗೊಂಬೆ ಅಧಿಕಾರಿಗಳು ಆಗಿದ್ದಾರಾ?: ಯಾವುದೇ ವಿಷಯ ಪೋಲಿಸರಿಗೆ ದೂರವಾಣಿ ಮೂಲಕ ತಿಳಿಸುವ ಪ್ರಯತ್ನ ಮಾಡಿದರೆ, ಯಾರು ಕರೆ ಸ್ವೀಕಾರ ಮಾಡೋದಿಲ್ಲ, ಕಾಂಗ್ರೆಸ್ ಪಕ್ಷದ ಕೈ ಗೊಂಬೆ ತರ ಅಧಿಕಾರಿಗಳ ವರ್ತನೆ ಕಾಣುತ್ತಿದೆ, ಇದರ ಬಗ್ಗೆ ದೂರು ನೀಡಲು ನಮ್ಮ ಪಕ್ಷ ನಿದ್ದರಿಸಿದೆ ಎಂದರು.

ವಾಲ್ಮೀಕಿ ನಿಗಮದ ಹಣ ಲೂಟಿ,ಶಿಕ್ಷೆ ಆಗಲಿ: ವಾಲ್ಮೀಕಿ ಸಮುದಾಯದ ಹಣ ಲೂಟಿ ಮಾಡಿ, ಇಡೀ ಸಮುದಾಯಕ್ಕೆ ಅನ್ಯಾಯ ಮಾಡುವ ಕೆಲಸ ಕಾಂಗ್ರೆಸ್ ಪಕ್ಷ ಮಾಡಿದೆ, ಇದರಲ್ಲಿ ಭಾಗಿ ಆದ ಸಚಿವರಿಗೆ ಶಾಸಕರಿಗೆ ಅಧಿಕಾರಿಗಳಿಗೆ ತಕ್ಕ ಶಿಕ್ಷೆ ಆಗಬೇಕು, ಹಾಗೂ ಮುಖ್ಯ ಮಂತ್ರಿಗಳ ಮೇಲೆ ಸೂಕ್ತ ತನಿಖೆ ಆಗಬೇಕು, ಆಗ ಮಾತ್ರ ಸಮುದಾಯದವರಿಗೆ ನ್ಯಾಯ ದೊರಕಿಸಲು ಸಾಧ್ಯ ಎಂದರು.

ವಾಲ್ಮೀಕಿ ಶ್ರೀಗಳೊಂದಿಗೆ ಮಾತು: ವಾಲ್ಮೀಕಿ ನಿಗಮದ ಹಣ ಲೂಟಿ ಮಾಡಿದವರ ವಿರುದ್ಧ ವಾಲ್ಮೀಕಿ ಪೀಠಾಧಿಪತಿಗಳು ಶೀಘ್ರದಲ್ಲೇ ಖಂಡಿಸುತ್ತಾರೆ, ಯಾರೇ ಮಾಡಿದರು ತಪ್ಪು ತಪ್ಪೇ ಇದರ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕು ಎಂದರು.

ಈ ಸಂದರ್ಭದಲ್ಲಿ ನಗರ ಬಿಜೆಪಿ ಅಧ್ಯಕ್ಷ ಮಲ್ಲಿಕಾರ್ಜುನ ಜೀನೂರು,ಸಿದ್ದರಾಮೇಶ ಮನ್ನಾಪುರ್, ಗ್ರಾಮೀಣ ಎಸ್.ಟಿ ಅಧ್ಯಕ್ಷ ತಿಮ್ಮಣ್ಣ ಹುಡಾ,ನಗರ ಅಧ್ಯಕ್ಷ ಮಹದೇವ ನಾಯಕ್, ಬಸವರಾಜ, ಪ್ರಧಾನ ಕಾರ್ಯದರ್ಶಿ ದೊರೆ ಬಾಬು ಸೇರಿದಂತೆ ಇತರರು ಇದ್ದರು.

UK ಉದಯಕಾಲ
ಅನಿಕೇತನ ಪಬ್ಲಿಕೇಷನ್ ಅಂಡ್ ಪ್ರಿಂಟರ್ಸ್
730/A-1, 'ವೃದ್ಧಿ' 2ನೇ ಮಹಡಿ, ನಾಗರಭಾವಿ 2ನೇ ಹಂತ,11ನೇ ಬ್ಲಾಕ್, ಬೆಂಗಳೂರು- 560072.
080 - 29558575
ಜಾಹೀರಾತಿಗಾಗಿ ಸಂಪರ್ಕಿಸಿ
ಪುಟ್ಟಪ್ಪ ಬಿ.ಬಾಣದ: 98867 74482
ಆರ್. ಪಶುಪತಿ: 96113 35416
ಕಛೇರಿ: 08029558575
ಪತ್ರಿಕೆ ಬರುತ್ತಿಲ್ಲವೇ ? ಆತ್ಮೀಯ ಓದುಗರೇ, ಉದಯಕಾಲ ಪತ್ರಿಕೆಯ ಚಂದಾದಾರರಾಗಲು ಅಥವಾ ಪತ್ರಿಕೆ ಸರಬರಾಜಿನಲ್ಲಿ ಸಮಸ್ಯೆ ಇದ್ದಲ್ಲಿ ಕೂಡಲೇ ಸಂಪರ್ಕಿಸಿ
ಬೆಂಗಳೂರು: 7676633839
ಮೈಸೂರು: 91645 54488
ಬೆಳಗಾವಿ/ಹುಬ್ಬಳ್ಳಿ: 73493 10075
ಕಲಬುರಗಿ: 99004 21224
ಶಿವಮೊಗ್ಗ : 87223 32811/73493 10075

ಮುದಗಲ್ ಅಡವಿ ಖರ್ಚಿಕಾಯಿ ಹೊಸಪೇಟೆಯಲ್ಲಿ ಫೇಮಸ್ !

ಕಹಿಯಾದರೂ ಬದುಕಿಗೆ ಸಿಹಿ: ದಿನಕ್ಕೆ 300-150 ರೂ.ಸಂಪಾದನೆ; ಖರೀದಿಗೆ ದಲ್ಲಾಳಿಗಳ ದುಂಬಾಲು

ಶರಣಯ್ಯ ಬಿ.ಒಡೆಯರ್
ಉದಯಕಾಲ ನ್ಯೂಸ್

ಮುದಗಲ್: ಕಪ್ಪುನೆಲದಲ್ಲಿ ಹೇರಳವಾಗಿ ಬೆಳೆಯುವ ಅಡವಿ ಖರ್ಚಿಕಾಯಿ ಮುದಗಲ್ ಪಟ್ಟಣವಷ್ಟೆ ಅಲ್ಲದೆ ಹೋಸಪೇಟೆಯಲ್ಲಿಯೂ ಫೇಮಸ್ ಆಗಿದ್ದು ನಿತ್ಯ ಗಾಡಿಗಟ್ಟಲೆ ಇಲ್ಲಿಂದ ರಪ್ತಾಗುತ್ತಿರುವದು ವಿಶೇಷ.! ಇದನ್ನೆ ನಂಬಿ ಕೊಂಡಿರುವ ನೂರಾರು ಮಹಿಳೆಯರು ನಿತ್ಯ ನೂರಾರು ರೂ.ಗಳನ್ನು ಸಂಪಾದಿಸುತ್ತಿದ್ದಾರೆ. ಇದರಿಂದ ಕೈಯಲ್ಲಿ ಕೆಲಸವಿಲ್ಲದೆ ಕಷ್ಟಕರದ ದಿನದಲ್ಲಿ ಬಡವರ ಬದುಕಿಗೆ ಅಡವಿ ಕಹಿ ಕರ್ಚಿಕಾಯಿ ಸಿಹಿ ನೀಡಿದೆ.

ಹೌದು ಕಪ್ಪು ಭೂಮಿಯನ್ನು ಹೊಂದಿರುವ ಬಿಸಿಲುನಾಡು ಮುದಗಲ್‌ದಲ್ಲಿ ವ್ಯಾಪಕವಾಗಿ ಬೆಳೆಯುವ ಈ ಕಹಿ ಕರ್ಚಿಕಾಯಿಗೆ ಪಟ್ಟಣದಲ್ಲಿ ಬಾರಿ ಬೇಡಿಕೆ ಇದೆ. ಇವುಗಳನ್ನೆ ನಂಬಿದ ಅನೇಕ ಕುಟುಂಭಗಳ ಬದುಕಿಗೆ ಆಸರೆಯೂ ನೀಡಿದೆ. ಮುಂಗಾರು ಆರಂಭವಾಗಿ ತಿಂಗಳು ಮುಗಿಯು ವಷ್ಟರಲ್ಲಿ ಎರೆ (ಕಪ್ಪು ಮಣ್ಣು) ಜಮಿನುಗಳಲ್ಲಿ ನೆಲಕ್ಕಂಟಿಕೊಂಡು ಬೆಳೆಯುವ ಬಳ್ಳಿಯಲ್ಲಿ ಈ ಕಾಯಿಗಳು ಕಾಣಸಿಗುತ್ತವೆ.ಕಪ್ಪು ಮಣ್ಣಿನ ಹೊಲ ದಲ್ಲಿ ಬೆಳೆಯುವ ಬಳ್ಳಿಯೊಳಗೆ ಕಡಲೆ ಕಾಯಿ ಗಾತ್ರದಲ್ಲಿರುವ ಈ ಕರ್ಚಿಕಾಯಿಯಲ್ಲಿ ಮೂಲೀ ಕೆಯ ಅಂಶವಿದ್ದು ಸ್ವಲ್ಪ ಕಹಿಯಾಗಿದ್ದರೂ ವೈಜ್ಞಾನಿಕವಾಗಿಯೂ ತಿನ್ನಲು ಆರೋಗ್ಯಕ್ಕೆ ಒಳ್ಳೆಯದು ಎಂದು ಹೇಳಲಾಗುತ್ತಿದೆ. ಈ ಹಿಂದೆ ರೈತರು ಮತ್ತು ಕೂಲಿಕಾರರ ಅಡುಗೆ ಮನೆಯಲ್ಲಿ ಮಾತ್ರ ಊಟಕ್ಕೆ ತಯಾರಿಸಲಾಗುತ್ತಿತ್ತು. ಆದರೆ ಈಗಾ ಈ ಕಹಿ ಖರ್ಚಿಕಾಯಿ ಪಟ್ಟಣಕ್ಕೂ ಕಾಲಿ ಟ್ಟಿದ್ದು ಅನೇಕರು ದುಂಬಾಲು ಬಿದ್ದು ಇವುಗಳನ್ನು ಕೊಳ್ಳುತ್ತಿರುವದು ಕಂಡುಬರುತ್ತಿದೆ.

ಬದುಕಿಗೆ ಸಿಹಿ: ಮುದಗಲ್ ಹೊರಬಾಗದ ಅಡವಿಯಲ್ಲಿ ಸಿಗುವ ಕಹಿ ಕರ್ಚಿಕಾಯಿಗಳನ್ನ ಆರಿಸಿಕೊಂಡು ಪಟ್ಟಣಕ್ಕೆ ಬರುವ ಮಹಿಳೆಯರು ರಸ್ತೆ ಪಕ್ಕದಲ್ಲಿ ಕುಳಿತು ಮಾರಾಟ ಮಾಡುತ್ತಾರೆ. ಆದರೆ ಇತ್ತೀಚೆಗೆ ಭತ್ತದನಾಡು ಹೊಸಪೇಟೆ ಹಾಗೂ ಗಂಗಾವತಿಯಿಂದ ವ್ಯಾಪಾರಿಗಳು ಇಲ್ಲಿಗೆ ಬಂದು ಮಹಿಳೆಯರಿಂದ 40 ರೂ.ಕೆಜಿಯಂತೆ ಕರ್ಚಿಕಾಯಿಗಳನ್ನು ಖರಿದಿಸುತ್ತಿದ್ದಾರೆ. ಇಲ್ಲಿಯ ಕಹಿ ಖರ್ಚಿಕಾಯಿಗಳಿಗೆ ಪಟ್ಟಣದಲ್ಲಿ ಬಾರಿ ಬೇಡಿಕೆ ಇರುವದರಿಂದ ನಿತ್ಯ 8-10 ಕ್ವಿಂಟಲ್ ಖರ್ಚಿಕಾಯಿ ಖರೀದಿಸಿ ಪಟ್ಟಣದ ಮಾರುಕಟ್ಟೆ ಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟಮಾಡಲಾಗುತ್ತದೆ ಎಂದು ದಲ್ಲಾಲಿಗಳು ಹೇಳುತ್ತಾರೆ. ಆಷಾಡ ಸಮೀಪಿಸುತಿದ್ದಂತೆ ಗ್ರಾಮೀಣ ಭಾಗದ ಜನರ ಕೈಯಲ್ಲಿ ಕೆಲಸವಿಲ್ಲದೆ ನಿತ್ಯದ ಸಂಸಾರದ ಕರ್ಚಿಗಾಗಿ ತೊಂದರೆ ಪಡುವ ಸಮಯದಲ್ಲಿ ಅನೇಕ ಮಹಿಳೆಯರು ಆಪತ್ತು ಬಾಂದವ ನಂತಿರುವ ಬೇವಿನ ಬೀಜ ಮತ್ತು ಕರ್ಚಿಕಾಯಿ ಆಯ್ದು ಬದುಕು ಕಂಡುಕೊಳ್ಳುತ್ತಿರುವದು ಮುದ ಗಲ್ ಭಾಗದಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ.

ರುಚಿ: ಅಡವಿಯಲ್ಲಿ ಸಾಮಾನ್ಯವಾಗಿ ಬೆಳೆಯುವ ಕಹಿ ಕರ್ಚಿಕಾಯಿ ಬಡವರ ಬಂಧು ಎಂದು ಕರೆಯಲಾಗುತ್ತದೆ. ಯಾವುದೆ ಮಸಾಲೆ ಹೆಚ್ಚಿನ ಖರ್ಚಿನ ಪದಾರ್ಥ ಹಾಕಿ ಅಡುಗೆ ಮಾಡುವುದು ಅವಶ್ಯಕತೆ ಇದಕ್ಕೆ ಬೇಕಿಲ್ಲ. ಕೇವಲ ಉಪ್ಪು,ಖಾರ ಹಾಗೂ ಬೆಳ್ಳೂಳಿ ಹಾಕಿ ಹುರಿದು ತಯಾರಿಸಿದ ಕರ್ಚಿಕಾಯಿ ರೊಟ್ಟಿಯಲ್ಲಿ ತಿನ್ನುತಿದ್ದರೆ ಒಳ್ಳೆ ರುಚಿ ಅಷ್ಟೆ ಅಲ್ಲದೆ ಆರೋಗ್ಯಕ್ಕೂ ಒಳ್ಳೆಯದಾಗಿದೆ ಎಂದು ಹೇಳಲಾಗುತ್ತದೆ.

ಮುದಗಲ್: ತರಕಾರಿ ಬಲು ದುಬಾರಿ ಬೆಲೆ ಕಳೆದುಕೊಂಡ ಕೊತಂಬರಿ.!

ಉದಯಕಾಲ ನ್ಯೂಸ್

ಮುದಗಲ್: ದಿನಬಳಕೆಯ ತರಕಾರಿ ಬೆಲೆ ದುಬಾರಿಯಾಗಿದ್ದರೆ ಹಸಿರು ಪಲ್ಲೆ ಸೇರಿ ಕೊತಂಬರಿ ಬೆಲೆ ಮಾತ್ರ ಒಂದು ರುಪಾಯಿಗೆ ತಲುಪಿದೆ. ನಿತ್ಯ ಉಪಯೋಗವಾಗುವ ಈರುಳ್ಳಿ, ಟೊಮ್ಯಾಟೊ, ಮೆಣಸಿನ ಕಾಯಿ, ಸೌತೆಕಾಯಿ, ಬದನೆ ಕಾಯಿ, ಈರೆಕಾಯಿ, ಬೆಂಡೆಕಾಯಿಗಳ ಬೆಲೆ ನೂರು ರೂ. ಹತ್ತಿರ ತಲುಪಿದ್ದು ತರಕಾರಿ ಪ್ರೀಯರು ಗೊಣಗಾ ಡುವಂತಾಗಿದೆ.

ಕಳೆದ ಹದಿನೈದು ಇಪ್ಪತ್ತು ದಿನಗಳಿಂದ ವಾಯು ಭಾರ ಕುಸಿದು ಬಿಟ್ಟು ಬಿಡದೆ ಜಿಟಿಜಿಟಿ ಮಳೆ ಇಂದಾ ಗಿ ತೋಟಗಳಲ್ಲಿದ್ದ ತರಕಾರಿ ನಷ್ಟವಾಗುತ್ತಿದೆ. ಇದರಿಂದಾಗಿ ಕೈಗೆ ಬಂದಿದ್ದ ತರಕಾರಿ ಕೆಟ್ಟು ಹೋಗಿದ್ದು ಇಳುವರಿ ಇಲ್ಲದಾಗಿದೆ ಎಂದು ರೈತರು ಹೇಳುತ್ತಾರೆ. ಪಟ್ಟಣದ ತರಕಾರಿ ಮಾರುಕಟ್ಟೆಯಲ್ಲಿ ಪ್ರತಿ ಕೇಜಿ ಟೊಮೆಟೊ 40ರೂ., ಚವಳಿ ಕಾಯಿ 60, ಬದನೆ ಕಾಯಿ 80, ಈರುಳ್ಳಿ 50, ಮೆಣಸಿನ ಕಾಯಿ 60, ಆಲುಗಡ್ಡೆ 60, ಈರೆಕಾಯಿ 50, ಬೆಂಡೆ ಕಾಯಿ 50, ಕ್ಯಾರೇಟ್ 80 ರೂ. ವರೆಗೆ ಮಾರಾಟ ವಾಗುತ್ತಿದೆ. ಆದರೆ ಈ ಹಿಂದೆ 10 ರಿಂದ 30 ರೂ.ವರೆಗೆ ಮಾರಾಟವಾಗುತಿದ್ದ ಪಾಲಾಕ್, ಸಬ್ಬಸಿಗೆ, ಪುಂಡಿ, ಮೆಂತೆ, ಹಾಗೂ ಕೊತಂಬರಿ ಸೇರಿ ಹಸಿರು (ಸೊಪ್ಪು) ಪಲ್ಲೆಯ ಬೆಲೆ ಕಳೆದ ಒಂದು ವಾರದಿಂದ ಕೇವಲ 2 ರೂ.ದಿಂದ 5 ರೂ.ಗೆ ಒಂದು ಕಟ್ಟು ಮಾರಾಟವಾಗುತಿದೆ.!

ಸುಮಾರು 50 ಹಳ್ಳಿಗಳಿಗೆ ಕೇಂದ್ರಸ್ಥಾನವಾಗಿರುವ ಮುದಗಲ್ ಪಟ್ಟಣದಲ್ಲಿ ಪ್ರತಿ ಸೋಮವಾರ ತರಕಾರಿ ಸಂತೆ ನಡೆಯುತ್ತದೆ. ಬೆಳಗಾವಿ, ಮಹಾರಾಷ್ಟ್ರ ದಿಂದ ಟೊಮ್ಯಾಟೊ, ಕ್ಯಾಪ್ಸಕಾಮ್, ಕ್ಯಾರೇಟ್ ಸೇರಿ ಅನೇಕ ತರಕಾರಿ ಗಾಡಿಯಲ್ಲಿ ತಂದು ವ್ಯಾಪಾ ರಸ್ಥರಿಗೆ ಮಾರಾಟ ಮಾಡಲಾಗುತ್ತದೆ. ಆದರೆ ಮಳೆಯ ಕಾರಣದಿಂದಾಗಿ ಹೊರ ರಾಜ್ಯದ ಹೈಬ್ರೀಡ್ ತರಕಾರಿ ಮಾರುಕಟ್ಟೆಗೆ ಬರುತ್ತಿಲ್ಲ, ಇದರಿಂದ ಸ್ಥಳೀಯ ಗ್ರಾಮೀಣ ಭಾಗದಲ್ಲಿನ ರೈತರಿಂದ ತರಕಾರಿ ಕೊಳ್ಳಲಾಗುತ್ತದೆ. ಇದರಿಂದ ಸ್ವಲ್ಪ ಮಟ್ಟಿಗೆ ಬೆಲೆ ಹೆಚ್ಚಾಗುತ್ತಿದೆ ಎಂದು ವ್ಯಾಪಾ ರಸ್ಥರು ಹೇಳುತ್ತಾರೆ. ಆದರೆ ಕೊಳ್ಳುವ ಗ್ರಾಹಕರಿಗೆ ತರಕಾರಿ ಬೆಲೆ ದುಬಾರಿ ಯಾಗುತ್ತಿರುವುದಕ್ಕೆ ಇದ್ದುದರಲ್ಲಿಯೇ ಕಡಿಮೆ ಪ್ರಮಾಣ ದಲ್ಲಿ ಮನೆಗೆ ತರಕಾರಿ ಕೊಂಡುಯ್ಯುತ್ತಿರುವದಾಗಿ ಗ್ರಾಹಕರು ಹೇಳುತ್ತಾರೆ. ಒಟ್ಟಾರೆ ಕಳೆದ ಇಪ್ಪತ್ತು ದಿನಗಳಿಂದ ಸುರಿಯುತ್ತಿರುವ ಜಿಟಿಜಿಟಿ ಮಳೆ ಕರಾವಳಿ ಭಾಗದಲ್ಲಿ ಅನೇಕ ಅವಾಂತರ ಶೃಷ್ಟಿಸಿದ್ದು ಒಂದುಕಡೆಯಾದರೆ, ರೈತರ ಬೆಳೆದ ಬೆಳೆ (ತರಕಾರಿ) ನಷ್ಟ ಮಾಡುವದರ ಜೊತೆಗೆ ಜನರ ಬದುಕಿಗೆ ಹೊರೆಯಾಗುತ್ತಿರುವದು ಮತ್ತೊಂದುಕಡೆ ಯಾಗಿದೆ.

ಜಿಟಿಜಿಟಿ ಮಳೆಗೆ ಸರಿಯಾಗಿ ತರಕಾರಿ ಬರೊದಿಲ್ಲ. ಇದರಿಂದ ಮಾರುಕಟ್ಟೆಯಲ್ಲಿ ತರಕಾರಿ ಕೊರತೆಯಾಗಿ ಸ್ವಲ್ಪ ಬೆಲೆ ಜಾಸ್ತಿಯಾಗಲಿದೆ. ಇನ್ನೂ ಹಸಿರು ಪಲ್ಲೆ ಬೇಗ ಕೆಟ್ಟು ಹೋಗುತ್ತಿದ್ದು ಒಂದೆರಡು ರೂ.ಗೆ ಒಂದು ಕಟ್ಟು ಮಾರುತಿದ್ದು ಬೆಲೆ ಇಲ್ಲದಾಗಿದೆ.
■ಅಹ್ಮದ್ ಬಾರಿಗಿಡ ತರಕಾರಿ ವ್ಯಾಪಾರಿ ಮುದಗಲ್.

ವ್ಯಕ್ತಿ ಕಾಣೆ ಪತ್ತೆಗೆ ಗಬ್ಬೂರು ಪೊಲೀಸರ ಮನವಿ

ಉದಯಕಾಲ ನ್ಯೂಸ್

ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಗಬ್ಬೂರು ನಿವಾಸಿಯಾದ ಅಣ್ಣಪ್ಪ (80) ತಂದೆ ನರಸಪ್ಪ ಎಂಬ ವ್ಯಕ್ತಿ ಇದೇ 2024ರ ಜು.20ರಂದು ಬೆಂಗಳೂರಿಗೆ ಹೋಗಿ ಬರುತ್ತೇನೆ ಅಂತಾ ಹೇಳಿ ಹೋದವರು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ಗಬ್ಬೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ವ್ಯಕ್ತಿವು 5.5ಫೀಟ್ ಅಡಿ ಎತ್ತರ, ತೆಳ್ಳನೆಯ ದೇಹ ಕಪ್ಪು ಮೈಬಣ್ಣ, ಸಾಧಾರಣ ಮೈಕಟ್ಟು, ಮನೆಯಿಂದ ಹೋಗುವಾಗ ಬಿಳಿಯ ಅಂಗಿ ಬಿಳಿಯ ಪಂಚೆ ಧರಿಸಿದ್ದು, ಕನ್ನಡ ಭಾಷೆ ಮಾತನಾಡುತ್ತಾನೆ.

ಈ ವ್ಯಕ್ತಿ ಬಗೆ ಸುಳಿವು ಸಿಕ್ಕಲ್ಲಿ ಠಾಣೆಯ ದೂರವಾಣಿ ಸಂಖ್ಯೆ: 8277980293, ಪಿ.ಎಸ್.ಐ 9480803860ಗೆ ಸಂಪರ್ಕಿಸುವಂತೆ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಲ್ಮೀಕಿ ನಿಗಮ ಭ್ರಷ್ಟಾಚಾರ ಖಂಡಿಸಿ ಜೆಡಿಎಸ್ ಪ್ರತಿಭಟನೆ

ಉದಯಕಾಲ ನ್ಯೂಸ್

ರಾಯಚೂರು: ಮಹರ್ಷಿ ವಾಲ್ಮೀಕಿ ನಿಗಮ ಮಂಡಳಿಯಲ್ಲಿ ನಡೆದ ಬಹುಕೋಟಿ ಭ್ರಷ್ಟಾಚಾ ರವನ್ನು ಖಂಡಿಸಿ ಜೆಡಿಎಸ್ ಜಿಲ್ಲಾ ಘಟಕದಿಂದ ರಾಯಚೂರಿನಲ್ಲಿ ರಾಜ್ಯ ಸರ್ಕಾರ ವಿರುದ್ಧ ಪ್ರತಿಭ ಟನೆ ನಡೆಸಿದರು.

ನಗರದ ಜಿಲ್ಲಾ ಜೆಡಿಎಸ್ ಕಚೇರಿಯಿಂದ ಟಿಪ್ಪು ಸುಲ್ತಾನ್ ಸರ್ಕಲ್ ಮೂಲಕ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನೆ ಮೆರವಣಿಗೆ ನಡೆಸಿ, ಹಣ ದುರುಪಯೋಗ ಪಡಿಸಿಕೊಂಡಿರುವ ಸರ್ಕಾರ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಮಹರ್ಷಿ ವಾಲ್ಮೀಕಿ ನಿಗಮದಿಂದ ಪರಿಶಿಷ್ಟ ಪಂಗಡದ ಸಮುದಾಯದ ಜನರ ಅಭಿವೃದ್ಧಿ ನಿಗಮದ ಹಣವನ್ನು ಖಾಸಗಿ ಕಂಪನಿಗಳು ನೀಡಿ 187 ಕೋಟಿ ರೂಪಾಯಿ ದುರ್ಬಳಕೆ ಮಾಡಿಕೊಂಡಿದೆ. ಇದಕ್ಕೆ ಇಲಾಖೆಯ ಸಚಿವರಾಗಿದ್ದ ನಾಗೇಂದ್ರ ಬಾಬು ಹಾಗೂ ನಿಗಮದ ಅಧ್ಯಕ್ಷ ಬಸವನಗೌಡ ದದ್ದಲ್ ಆಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿದ್ದಾರೆ.

ಅಲ್ಲದೇ ಈ ಹಣವನ್ನು ಕಾಂಗ್ರೆಸ್ ಸರ್ಕಾರ ಲೋಕಸಭೆ ಚುನಾವಣೆಗೆ ಬಳಕೆ ಮಾಡಿಕ